ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಈ) ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಯವಂತ ಸುಬ್ರಾಯ (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಜಯವಂತ ಸುಬ್ರಾಯ (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಉದ್ದೇಶವೇನೆಂದರೆ, ಅಬ್ಕಾರಿ ಇಲಾಖೆಯಲ್ಲಿ ಅಪರಾಧಗಳನ್ನು ಕನಿಷ್ಠ ಪ್ರಮಾಣಕ್ಕೆ ತರಲು ಒಂದು ವಿವರಣಾ ಕ್ರಮವಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ 45ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅಪರಾಧಕ್ಕಾಗಿ ಕನಿಷ್ಠ ಐದು ಸಾವಿರ ರೂಪಾಯಿಗಳು ಮತ್ತು ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡವನ್ನು ನಿಗದಿಪಡಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಈ ಪ್ರಕರಣದಡಿಯಲ್ಲಿ ಕೇವಲ ಐದು ಸಾವಿರ ರೂಪಾಯಿಗಳವರೆಗೆ ಗರಿಷ್ಠ ದಂಡವನ್ನು ವಿಧಿಸಲಾಗುತ್ತದೆ. ಆದರಂತೆ, 1999-2000ನೇ ಇಸವಿಯ ಆಯವ್ಯಯ ಪತ್ರದಲ್ಲಿ ಈ ಸಂಬಂಧದ ಕಾರ್ಯನೀತಿಯೊಂದನ್ನು ಪ್ರಕಟಿಸಲಾಗಿದೆ ಮತ್ತು ಇದಕ್ಕೆ ಆಯವ್ಯಯದಲ್ಲಿ ಈಗಾಗಲೇ ಮಂಜೂರಾತಿಯಾಗಿರುತ್ತದೆ. ವಿಧಾನ ಪರಿಷತ್ತಿನಲ್ಲೂ ಕೂಡ ಈ ವಿಧೇಯಕವನ್ನು ಮಂಡಿಸಲ್ಪಟ್ಟಿದ್ದು ಅಂಗೀಕೃತವಾಗಿರುತ್ತದೆ. ಸದರಿ ವಿಧೇಯಕದ ಮುಖಾಂತರ ಅಬ್ಕಾರಿ ಇಲಾಖೆಯ ಅಪರಾಧಗಳನ್ನು ಕಡಿಮೆ ಮಾಡಬೇಕು ಮತ್ತು ಶಿಕ್ಷೆಯನ್ನೂ ಸಹ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಮಾಡುವುದರಿಂದ ಶಿಸ್ತುಬದ್ಧವಾದ ಆರ್ಥಿಕ ನೀತಿಯನ್ನು ರೂಪಿಸಿದಂತಾಗುತ್ತದೆನ್ನುವ ಉದ್ದೇಶದಿಂದ ವಿಧೇಯಕಕ್ಕೆ ತಿದ್ದುಪಡಿ ತರಲಾಗಿದೆ. ಈ ವಿಷಯವಾಗಿ ಬಹಳಷ್ಟು ಅನೇಕ ಹಿರಿಯ ಮಾನ್ಯ ಸದಸ್ಯರುಗಳು ಮಾತನಾಡಿ ಅಬ್ಕಾರಿ ಇಲಾಖೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತರುವುದರೊಂದಿಗೆ ಅಪರಾಧಗಳನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕೆಂದು ಸಲಹೆ-ಸೂಚನೆಗಳನ್ನು ಕೊಟ್ಟಿರುವುದನ್ನು ಗಮನದಲ್ಲಿಟ್ಟುಕೊಂಡು ಸದರಿ ಅಧಿನಿಯಮಕ್ಕೆ ತಾವುಗಳು ಮಂಜೂರಾತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಐದು ಸಾವಿರ ರೂಪಾಯಿಗಳವರೆಗೆ ಇದ್ದ ದಂಡವನ್ನು ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ತಾವು ಹೆಚ್ಚಿಸಿದ್ದೀರಿ. ಆದರೆ, ಇದರಲ್ಲಿ ಪೆನಾಲ್ಟಿ ಹಾಕತಕ್ಕಂಥದ್ದಾಗಲಿ ಅಥವಾ ಪೀನಲ್ ಕ್ಲಾಸ್ ತಂದರೆ ವಾಸಿ. ಎಕ್ಸೈಜ್‌ನವರಿಗೆ ಹಣವೇನೂ ಅಂತಹ ದೊಡ್ಡದಲ್ಲ. ದಂಡದ ಜೊತೆಗೆ ಇಂಪ್ರಿಸನ್‌ಮೆಂಟ್ ಸ್ವಲ್ಪ ಇದ್ದರೆ ಹೆದರಿಕೆ ಇರುತ್ತದೆ. ಇಲ್ಲದಿದ್ದರೆ, ಸೆಕೆಂಡ್ಸ್, ಥರ್ಡ್ಸ್ ಮಾರುವವರು, ಅನಂತರ ಕೊಲ್ಯೂಶನ್ ಆಫ್ ಅವರ್ ಓನ್ ಎಕ್ಸೈಜ್ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ ಅಥವಾ ಫ್ಯಾಕ್ಟರಿ ಮೇಲೆ ಏನು ಹಾಕುತ್ತೀರಿ, ಅವರೆಲ್ಲರೂ ಒಂದಾಗಿ ಎಷ್ಟೋ ಅಪರಾಧಗಳನ್ನು ಮಾಡುವುದರಿಂದ ಅವರಿಗೆ ಯಾರೂ ಶಿಕ್ಷೆ ಕೊಡುವುದಕ್ಕಾಗುವುದಿಲ್ಲ

ಮತ್ತು ನಮ್ಮವರೇ ಅನೇಕ ಸಾರಿ ಪ್ರೋತ್ಸಾಹಿಸುತ್ತಾರೆ. ಅವರಿಗೆ ಯಾರು ಬೇಕೋ ಅಂತಹವರನ್ನು ನಿಮ್ಮಿಂದ ಹಾಕಿಸಿಕೊಂಡು ಹೋಗುತ್ತಾರೆ. ಉದಾಹರಣೆಗೆ, ಯಾವುದೋ ಒಂದು ನಿರ್ದಿಷ್ಟವಾದ 'ಎ' ಡಿಸ್ಪಿಲರಿ ಇದ್ದರೆ ಅವರೇ ನೇರವಾಗಿ ಬಂದು ಯಾವ ಅಧಿಕಾರಿಗಳಿಗೆ ಬೇಕೋ ಅದನ್ನು ಹಾಕಿಸಿಕೊಂಡು ಹೋಗುತ್ತಾರೆ. ಅದನ್ನು ನೀವು ತಡೆಗಟ್ಟುವುದಕ್ಕಾಗುವುದಿಲ್ಲ. ಕನಿಷ್ಠ ಪಕ್ಷ ಒಂದೆರಡು ಪ್ರಕರಣಗಳಲ್ಲಾದರೂ ಅವರನ್ನು ಇಂಪ್ರಿಸನ್‌ಮೆಂಟ್ ಮಾಡುವಂತಾದರೆ ನೀವು ಏನಾದರೂ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆ. ಸಂಪೂರ್ಣವಾಗಿ ಕಂಟ್ರೋಲ್ ಮಾಡುತ್ತೀರೆಂದು ನಾನು ಹೇಳುವುದಕ್ಕಾಗುವುದಿಲ್ಲ, ಆ ಹೆದರಿಕೆ ಅವರಿಗೆ ಇರುತ್ತದೆ.

ಶ್ರೀ ಜಯವಂತ ಸುಬ್ರಾಯ : ಮಾನ್ಯ ಅಧ್ಯಕ್ಷರೆ, ಮೊದಲು ಕಾನೂನಿನಲ್ಲಿ ಒಂದು ಸಾವಿರ ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳವರೆಗೆ ದಂಡ ಹಾಕುವಂಥ ಪದ್ಧತಿ ಮತ್ತು ನಿಯಮಾವಳಿ ಇತ್ತು. ಅಪರಾಧವೆಸಗುವವರಿಗೆ ಸ್ವಲ್ಪ ಹೆದರಿಕೆಯಾಗಬೇಕು, ಸೆಕೆಂಡ್ಸ್ ಮತ್ತು ಬೋಗಸ್ ಇನ್‌ವಾಯ್ಸ್‌ಗಳು ಮತ್ತು ಅನಧಿಕೃತವಾಗಿ ಮಾರಾಟ ಮಾಡುವುದನ್ನು ತಡೆಗಟ್ಟಬೇಕು, ಅದರ ಮುಖಾಂತರ ಎಕ್ಸೈಜ್ ಇಲಾಖೆಯಲ್ಲಿ ಸ್ವಲ್ಪ ವಿಶ್ವಾಸ ಮೂಡಿಸಬೇಕೆಂಬ ಘನ ಉದ್ದೇಶದಿಂದ ನಾವು ದಂಡವನ್ನು ಐದು ಸಾವಿರ ರೂಪಾಯಿಗಳಿಂದ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಿದ್ದೇವೆ. ಅದಕ್ಕೋಸ್ಕರ ತಮ್ಮ ಮೂಲಕ ಸದನದಲ್ಲಿರುವ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದಕ್ಕೆ ಮಂಜೂರಾತಿ ಕೊಡುವ ಮೂಲಕ ಎಕ್ಸೈಜ್ ಇಲಾಖೆಯಲ್ಲಿ ಆರ್ಥಿಕ ಭದ್ರತೆ ತರಲು ಪ್ರಯತ್ನಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಫೆನಾಲ್ಪಿ ಜಾಸ್ತಿ ಮಾಡಿದ ಕಡೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆಂದು ಸಾಮಾನ್ಯ ಪ್ರಜ್ಞೆಯಿರುವವರಿಗೆ ಗೊತ್ತು. ಐದು ಸಾವಿರ ರೂಪಾಯಿಗಳಿರುವ ಪೆನಾಲ್ಟಿಯನ್ನು ನೀವು ಇಪ್ಪತ್ತೈದು ಸಾವಿರ ರೂಪಾಯಿಗಳಷ್ಟು ಮಾಡಿದರೆ ಕೇಸ್ ಕಡಿಮೆಯಾಗುತ್ತದೆ! ಏಕೆಂದರೆ, ನಿಮ್ಮ ಇಲಾಖೆಯವರು ಕೇಸ್ ಹಾಕುವುದಿಲ್ಲ, ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅಪರಾಧಿಗಳನ್ನು ಅಲ್ಲಿಯೇ ಬಿಟ್ಟುಬಿಡುತ್ತಾರೆ. ನೀವು ನಿಜವಾಗಿಯೂ ಇದನ್ನು ನಿರ್ಬಂಧಿಸಬೇಕೆಂದಿದ್ದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ತಪ್ಪಿತಸ್ಥರಿಗೆ ಏನಾದರೂ ಶಿಕ್ಷೆ ವಿಧಿಸುವಂತಾಗಬೇಕು. ಐ.ಪಿ.ಸಿ., ಸಿ.ಆರ್.ಪಿ.ಸಿ.ಗೆ ಸಂಬಂಧಿಸಿದಂತೆ ಶಿಕ್ಷೆ ಕೊಡುವುದೆನ್ನುವ ಭಾವನೆ ನಿಮ್ಮದಾಗಿದ್ದರೆ ಲೈಸೆನ್ಸ್ ಅನ್ನು ರದ್ದುಗೊಳಿಸುತ್ತೇವೆಂಬ ಕಾನೂನನ್ನು ತೆಗೆದುಕೊಂಡು ಬನ್ನಿ ಮತ್ತು ಅವರಿಗೆ ಅಲಾಟ್‌ಮೆಂಟ್ ನೀಡುವುದನ್ನು ನಿಲ್ಲಿಸುತ್ತೇವೆಂಬ ಕಾನೂನನ್ನು ತನ್ನಿ. ನಾವು ಸಚಿವರ ಈ ಕನ್‌ಸರ್ನ್ ಅನ್ನು ಒಪ್ಪಿಕೊಳ್ಳಬೇಕಾಗುತ್ತದೆ. ದುಡ್ಡು ಜಾಸ್ತಿ ಮಾಡಿದಾಕ್ಷಣಕ್ಕೆ ಅಪರಾಧ ಕಡಿಮೆಯಾಗುತ್ತದೆಂದು ಭಾವಿಸಿಕೊಳ್ಳುವುದು ಬಹುಶಃ ಸರ್ಕಾರಕ್ಕೆ ಒಳ್ಳೆಯದಲ್ಲ. ಇದರ ಬಗ್ಗೆ ಇನ್ನೊಂದು ಸಲ ಯೋಚನೆ ಮಾಡಿ. ಇದರಿಂದ ಮಧ್ಯದಲ್ಲಿರುವವರಿಗೆ ದುಡ್ಡು ಮಾಡಿಕೊಳ್ಳಲು ತಾವು ಹೆಚ್ಚು ವ್ಯವಸ್ಥೆ ಮಾಡಿಕೊಡುತ್ತಿರುವುದನ್ನು ಬಿಟ್ಟರೆ ಯಾವ ಅಪರಾಧ ಸಂಹಿತೆಯನ್ನೂ ಇದರಲ್ಲಿ ನೀವು ರೂಪಿಸಿಕೊಳ್ಳುವುದಕ್ಕಾಗುವುದಿಲ್ಲ, ಯಾವ ಅಪರಾಧವೂ ಕಡಿಮೆಯಾಗುವುದಿಲ್ಲವಾದ್ದರಿಂದ ಇನ್ನೊಂದು ಸಲ ತಾವು ಯೋಚನೆ ಮಾಡಬೇಕು. By putting more penalty, you are

creating more agency for making money.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹೇಳಿರುವುದನ್ನು ನಾನು ಸಮರ್ಥಿಸಿಕೊಳ್ಳುತ್ತೇನೆ. ಏಕೆಂದರೆ, ಪೆನಾಲ್ಟಿ ಹಾಕುವಂಥಾದ್ದು, ಮಾಲನ್ನು ಹಾಗೂ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂಥಾದ್ದು ಇದ್ದೇ ಇದೆ. ಆದುದರಿಂದ, ಅಬ್ಕಾರಿ ಇಲಾಖೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಇದರಿಂದ ಅಲ್ಲಿನ ಸಿಬ್ಬಂದಿ ವರ್ಗದವರಿಗೆ ಇನ್ನಷ್ಟು ಹಣ ಮಾಡಿಕೊಳ್ಳುವ ದಂಧೆಯಾಗುತ್ತದೆಯೇ ವಿನಾ ಮತ್ತೇನೂ ಇಲ್ಲ. ಅಪರಾಧ ಮಾಡಿದವರ ವಿರುದ್ಧ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಂಡು ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಸುಗಮಗೊಳಿಸಬೇಕೆಂಬ ಬಗ್ಗೆ ತಮ್ಮ ಪ್ರಾಮಾಣಿಕ ಅನಿಸಿಕೆ ಇರುವುದಾದರೆ ತಪ್ಪಿತಸ್ಥರಿಗೆ ಸಜಾ ವಿಧಿಸುವ ದಿಸೆಯಲ್ಲಿ ವಿಧೇಯಕಕ್ಕೆ ತಿದ್ದುಪಡಿ ಮಾಡಿದರೆ ಮಾತ್ರ ಇದು ಸರಿಯಾಗುತ್ತದೆ, ಇಲ್ಲದಿದ್ದರೆ ಖಂಡಿತವಾಗಿಯೂ ದುರಸ್ತಿಯಾಗುವುದಿಲ್ಲವಾದ್ದರಿಂದ ತಾವು ಇದನ್ನು ಪುನರ್ ಪರಿಶೀಲಿಸಬೇಕು.

ಶ್ರೀ ಜಯವಂತ ಸುಬ್ರಾಯ : ಮಾನ್ಯ ಅಧ್ಯಕ್ಷರೆ, ನಾನು ಪುನಃ ತಮ್ಮ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದೇನೆಂದರೆ, ಪದೇ ಪದೇ ಸೆಕೆಂಡ್ಸ್ ಮಾರಾಟ ಮಾಡುವಂತಹವರಿಗೆ, ಬೋಗಸ್ ಇನ್‌ವಾಯ್ಸಸ್ ಮಾಡುವಂತಹವರಿಗೆ ಮತ್ತು ಅನಧಿಕೃತವಾಗಿ ವ್ಯವಹಾರ ಮಾಡುವಂತಹವರಿಗೆ ಸ್ವಲ್ಪ ಬಿಗುವಿನ ಪಾಠ ಕಲಿಸಬೇಕೆಂಬ ಘನ ಉದ್ದೇಶದಿಂದ ಸದರಿ ವಿಧೇಯಕಕ್ಕೆ ತಿದ್ದುಪಡಿ ತರಲಾಗಿದೆ. ಈ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿರುವ ಸಲಹೆ ಉತ್ತಮವಾಗಿದೆ. ಇದನ್ನು ನಾವು ಪ್ರಥಮ ಬಾರಿಗೆ ಅನುಷ್ಠಾನಕ್ಕೆ ತರುತ್ತಿರುವುದರಿಂದ ಇದರ ಆಗು-ಹೋಗುಗಳನ್ನು ಹಾಗೂ ಸಾಧಕ-ಬಾಧಕಗಳನ್ನು ಮುಂದಿನ ದಿನಗಳಲ್ಲಿ ನೋಡಿಕೊಂಡು ಈ ದಿಸೆಯಲ್ಲಿ ಮಾನ್ಯ ಸದಸ್ಯರುಗಳು ನೀಡಿರುವ ಸಲಹೆ-ಸೂಚನೆಗಳನ್ನು ಸಹ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆಂಬ ವಿಷಯವನ್ನು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ವಿಧೇಯಕಕ್ಕೆ ತಿದ್ದುಪಡಿ ತರುವ ಮೂಲಕ ಒಂದು ಪ್ರಯೋಗ ಮಾಡುತ್ತಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ, ಒಳ್ಳೆಯದು. ಆದರೆ, ಸೆಕೆಂಡ್ಸ್ ವಿಪರೀತವಾಗಿದ್ದು, ಇದನ್ನು ಮಾರಾಟ ಮಾಡುವುದಕ್ಕೆ ಹಳ್ಳಿಯಲ್ಲಿರುವ ಜನರು ಈ ದಂಧೆಗಿಳಿದಿದ್ದಾರೆ. ತಪ್ಪಿತಸ್ಥರಿಗೆ ಒಮ್ಮೆ ದಂಡ ವಿಧಿಸುತ್ತೀರಿ. ಎರಡನೇ ಬಾರಿ ಅಪರಾಧ ಮಾಡಿ ಸಿಕ್ಕಿ ಹಾಕಿಕೊಂಡರೆ ಅವರನ್ನು ಜೈಲಿಗೆ ಕಳುಹಿಸುವಂಥ ವ್ಯವಸ್ಥೆ ಮಾಡಬೇಕು. ಇಲ್ಲವೇ ಕನಿಷ್ಠ ದಂಡವಾದ ಐದು ಸಾವಿರ ರೂಪಾಯಿಗಳಿಂದ ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ದಂಡ ವಿಧಿಸಿದ ನಂತರ ಮತ್ತೆ ಅದೇ ವ್ಯಕ್ತಿ ಅಪರಾಧ ಮಾಡಿ ಸಿಕ್ಕಿದಾಗ ಹಿಂದೆ ವಿಧಿಸಿದ್ದ ದಂಡದ ಎರಡರಷ್ಟು ವಿಧಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ಕುರಿತು ಬಿಗಿ ನಿಲುವು ತೆಗೆದುಕೊಳ್ಳದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಈ ತಿದ್ದುಪಡಿಯಾದ ವಿಧೇಯಕ ಅಂಗೀಕೃತವಾಗಿದೆ. ತಾವುಗಳು ಮಾತನಾಡುತ್ತಾ ಸಲಹೆ-ಸೂಚನೆಗಳನ್ನು

ಏನು ಕೊಟ್ಟಿದ್ದೀರಿ, ಅದರ ಬಗ್ಗೆ ಸಚಿವರು ನಂತರ ಕ್ರಮ ಕೈಗೊಳ್ಳಬಹುದು. ವಿಧೇಯಕಕ್ಕೆ ಈಗ ಮತ್ತೊಮ್ಮೆ ತಿದ್ದುಪಡಿ ಮಾಡಿ ವಿಧಾನ ಪರಿಷತ್ತಿನ ಅಂಗೀಕಾರಕ್ಕಾಗಿ ಹೋಗುವುದು ಕಷ್ಟವಾಗುತ್ತದಾದ್ದರಿಂದ ದಯಮಾಡಿ ಇದಕ್ಕೆ ಒಪ್ಪಿಗೆ ನೀಡಬೇಕು.

ಅಧ್ಯಕ್ಷರು: ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಹೊಸಬರಾಗಿದ್ದು ವಿಧಾನಸಭೆಗೆ ಮೊದಲನೆಯ ಸಲ ಆಯ್ಕೆಯಾಗಿ ಬಂದಿದ್ದಾರೆ. ವಿಧೇಯಕಕ್ಕೆ ತಂದಿರುವ ತಿದ್ದುಪಡಿ ಬಗ್ಗೆ ಅಚ್ಚುಕಟ್ಟಾದ ವಿವರಣೆ ಕೊಟ್ಟು ಮಾನ್ಯ ಸದಸ್ಯರುಗಳೆಲ್ಲರೂ ಎತ್ತಿದ ಆಕ್ಷೇಪಣೆಗಳಿಗೂ ಉತ್ತರ ಕೊಟ್ಟಿರುವುದನ್ನು ಗಮನಿಸಿದರೆ ನಿಜವಾಗಿಯೂ ಅವರನ್ನು ಅಭಿನಂದಿಸಬೇಕು. ಅವರ ಕಾರ್ಯ ವೈಖರಿ ನೋಡಿದರೆ ನಮಗೆ ಸಂತೋಷವಾಗುತ್ತದೆಂದು

2.10 ಪಿ.ಎಂ.

ಅವರು ಹೇಳಿದರು, ಇದೊಂದು ಪ್ರಯೋಗ ಮಾಡುತ್ತಿದ್ದೇವೆ. ತಾವು ಹೇಳಿದಂತಹ ಎಲ್ಲಾ ಸಲಹೆಗಳನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ಈ ಪ್ರಯೋಗದಲ್ಲಿ ಕೂಡ ನಮಗೆ ಹೆಚ್ಚು ಫಲಕಾರಿ ಆಗಲಿಲ್ಲ ಎಂದರೆ ತಮ್ಮ ಸಲಹೆಗಳನ್ನು ಇನ್‌ಕಾರ್ಪೋರೇಟ್ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗ ಇದನ್ನು ಮತಕ್ಕೆ ಹಾಕೋಣ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2

ಅಧ್ಯಕ್ಷರು : 'ಖಂಡ 2 ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜೈವಂತ್ ಸುಬ್ರಾಯ (ಅಬ್ಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಉ) (ಈ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ವಿಚಾರ ಹೋದ ಅಧಿವೇಶನದಲ್ಲಿ ಬಹಳ ವಿವರವಾಗಿ ವಿಧಾನಪರಿಷತ್ತಿನಲ್ಲಿ ಚರ್ಚೆ ಆಗಿದೆ. ಹಾಗೂ ಅನೇಕ ಸಲಹೆ ಸೂಚನೆಗಳನ್ನು ಅದರಲ್ಲಿ ತಂದು ನಾವು ಒಪ್ಪಿಗೆ ಮಾಡಿಕೊಟ್ಟಿದ್ದೇವೆ. ಏನು ಪ್ರತಿ ವರ್ಷ ಪೋಡಿ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಹೆಚ್ಚುತ್ತಿವೆ, ರೈತನಿಗೆ ಬಹಳ ಅನಾನುಕೂಲ ಆಗುತ್ತಿದೆ. ಆದ್ದರಿಂದ ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಕೆಲವು ಸುಧಾರಣೆಗಳನ್ನು ತಂದಿರತಕ್ಕದ್ದು. ಇದು ಬಹಳ ಉತ್ತಮವಾದ ಸಲಹೆ ಎಂದು ನನ್ನ ಅಭಿಪ್ರಾಯ.

ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ,

ಅಧ್ಯಕ್ಷರು : 'ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು